

# ಸಂಘರ್ಷದೆಡೆ ದಕ್ಷ ಅರಣ್ಯಾಧಿಕಾರಿ ನಿಯೋಜಿಸಿ

70ರ ದಶಕದಲ್ಲಿ ಕರ್ನಾಟಕ ಅರಣ್ಯ ಸೇವೆಗೆ ಬಂದಾಗ ನಮ್ಮನ್ನು ಬಂಡೀಪುರಕ್ಕೆ ಕರೆದುಕೊಂಡು ಹೋಗಲಾಗಿತ್ತು. ಅಲ್ಲಿ ಮರಗಳ ದಟ್ಟಣೆ, ಹಸಿರು ಪರಿಸರ ಉತ್ತರ ಭಾರತದ ನಮಗೆ ಖುಷಿ ನೀಡಿತ್ತು, ನಿಧಾನವಾಗಿ ಬಂಡೀಪುರ ಭಾಗದಲ್ಲಿ ಲಂಟಾನ ಕಳೆ ಕಾಣಿಸಿಕೊಂಡು ಅದು ಎಲ್ಲೆಡೆ ಹಬ್ಬಿತು. ಇದನ್ನು ಸುಲಭವಾಗಿ ತೆಗೆಯಲು ಕೂಡ ಆಗುವುದಿಲ್ಲ. ಈ ಕಳೆ ಪ್ರಾಣಿಗಳಿಗೆ ಬೇಕಾದ ಹುಲ್ಲು, ಇತರೆ ಆಹಾರವನ್ನು ನಾಶ ಮಾಡಿಬಿಡುತ್ತದೆ. ಬಂಡೀಪುರದಲ್ಲಿ ಈಗ ಆಗಿರುವುದು ಇದೆ. ಆಹಾರದ ಪ್ರಮಾಣ ಕಡಿಮೆಯಾಗಿ ಜಿಂಕೆಗಳು ಅರಣ್ಯದಂಚಿಗೆ ಹೊಲಗಳಿಗೆ ನುಗ್ಗುತ್ತವೆ. ಅವುಗಳನ್ನು ಬೇಟೆಯಾಡಲು ಹುಲಿಗಳು ಬರುತ್ತವೆ. ಹುಲಿ ಆಹಾರಕ್ಕಾಗಿ ದನಗಳ ಬೇಟೆ ಮಾಡುತ್ತಲೇ ಮಾನವನ ಮೇಲೆ ದಾಳಿಗೂ ಮುಂದಾಗಿರುವ ಪ್ರಕರಣ ಹೆಚ್ಚಾಗಿವೆ. ಸಂಘರ್ಷದ ಸ್ವರೂಪ ಹೀಗೆ ಬದಲಾಗುತ್ತಲೇ ಇದೆ. ಇದು ಕರ್ನಾಟಕದ ಸನ್ನಿವೇಶ ಮಾತ್ರ ಎಂದುಕೊಳ್ಳಬೇಡಿ. ಅತ್ಯಧಿಕ ಹುಲಿ ಸಂತತಿ ಹೊಂದಿರುವ ಮಧ್ಯಪ್ರವೇಶ, ರಾಜಸ್ಥಾನ, ಮಹಾರಾಷ್ಟ್ರ ಸಹಿತ ಹಲವು ರಾಜ್ಯಗಳಲ್ಲೂ ಸಂಘರ್ಷದ ಪರಿಸ್ಥಿತಿ ಇದೆ.

20 ವರ್ಷದ ಹಿಂದೆ ಬಿಳಿಗಿರಿರಂಗನಬೆಟ್ಟ ಅರಣ್ಯ ಪ್ರದೇಶಕ್ಕೆ ಹೋಗಿದ್ದಾಗ ಅಲ್ಲಿನ ರುಚಿಕರ ಕಾಡು ನೆಲ್ಲಿಯ ಪರಿಚಯವಾಯಿತು. ಅಲ್ಲಿನ ಅಧಿಕಾರಿಗಳು ಒಂದಿಷ್ಟು ನಿವೃತ್ತಿ ನಂತರವೂ ಅರಣ್ಯ ಸಂರಕ್ಷಣೆಯಲ್ಲಿ ತೊಡಗಿಸಿಕೊಂಡಿರುವ, ದಕ್ಷತೆ, ಪ್ರಾಮಾಣಿಕತೆಗೆ ಹೆಸರಾದ ಬ್ರಿಜ್‌ಕಿಶೋರ್ ಸಿಂಗ್ ಅವರು ವನ್ಯಜೀವಿ–ಮಾನವ ಸಂಘರ್ಷದ ಸ್ವರೂಪವನ್ನು ಎಳೆಎಳೆಯಾಗಿ ಬಿಡಿಸಿಡುತ್ತಾರೆ.

ಅವರು ಅರಣ್ಯ ಇಲಾಖೆಯ ಸಮೃದ್ಧ ಕಾಲವನ್ನೂ ನೋಡಿದ್ದಾರೆ. ಪರಿಸ್ಥಿತಿ ಬದಲಾಗಿದ್ದನ್ನೂ ಕಣ್ಣಾರೆ ಕಂಡಿದ್ದಾರೆ. ಈಗ ಆಗುತ್ತಿರುವ ಅನಾಹುತಗಳ ಪರಿಣಾಮವನ್ನೂ ವೈಜ್ಞಾನಿಕ ನೆಲೆಯಲ್ಲಿಯೇ ವಿಶ್ಲೇಷಿಸುತ್ತಲೇ ಮುಂದೇನಾಗಬೇಕು ಎಂದು ಹೇಳುತ್ತಾರೆ.

## ಸಂಘರ್ಷದ ನೋಟ

ಕರ್ನಾಟಕ ಅತಿ ಹೆಚ್ಚು ಅರಣ್ಯ ಪ್ರದೇಶ ಹಾಗೂ ವನ್ಯಜೀವಿಗಳ ಸಾಂದ್ರತೆ ಹೊಂದಿರುವ ರಾಜ್ಯ. ಹೆಚ್ಚು ಪ್ರವಾಸಿಗರನ್ನು ಆಕರ್ಷಿಸುವ ಬಂಡೀಪುರ ಹಾಗೂ ನಾಗರಹೊಳೆ ರಾಷ್ಟ್ರೀಯ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಘೀಳಿಡುವ ಆನೆಗಳು, ಗರ್ಜಿಸುವ ಹುಲಿಗಳಿಗಿಂತ ಯಂತ್ರಗಳ ಗರ್ಜನೆಯೇ ಜೋರಾಗಿದೆ. ವರ್ಷದ ಎಲ್ಲಾ ಕಾಲದಲ್ಲೂ ಒಂದಿಲ್ಲೊಂದು ಕಾಮಗಾರಿಗಳು ಅರಣ್ಯ ಪ್ರದೇಶದ ನಿರ್ವಹಣೆ, ಸುಂದರಗೊಳಿಸುವ ಭಾಗವಾಗಿ ನಡೆಯುತ್ತಲೇ ಇರುತ್ತವೆ. ಆನೆಗಳೀಗ ಅರಣ್ಯದಂಚನ್ನು ದಾಟಿ ಸಮೀಪದ ಪಟ್ಟಣ ಇಲ್ಲವೇ ನಗರ ಪ್ರದೇಶಕ್ಕೆ ಲಗ್ಗೆ ಇಡುತ್ತಿವೆ. ಹುಲಿ ಮೈಸೂರು ವಿಮಾನ ನಿಲ್ದಾಣದ ಆಸುಪಾಸಿನಲ್ಲೇ, ನಗರದ ಪ್ರಮುಖ ಭಾಗದಲ್ಲಿಯೇ ಹುಲಿ ಸಂಚರಿಸುತ್ತಿದೆ. ಚಿರತೆಗಳು ಮನೆಗಳಿಗೆ ನುಗ್ಗಿ ದಾಳಿ ಮಾಡುವ ಪ್ರಕರಣಗಳು ಸಾಮಾನ್ಯವಾಗಿವೆ. ಕೈಗಾರಿಕೀಕರಣ, ಗಣಿಗಾರಿಕೆ, ಅಣೆಕಟ್ಟು ನಿರ್ಮಾಣ, ನಗರೀಕರಣದಿಂದಾಗಿ ವನ್ಯಜೀವಿಗಳ ಆವಾಸಸ್ಥಾನಗಳು ಹಾಳಾಗಿ ಸಂಘರ್ಷದ ಪ್ರಮಾಣದಲ್ಲಿ ಏರಿಕೆಯಾಗಿದೆ.

ಕರ್ನಾಟಕದಲ್ಲಿ ಕಾಡಾನೆ ಕಾಟದಿಂದ ಏಳೆಂಟು ಜಿಲ್ಲೆಗಳ ಜನ ತೊಂದರೆ ಅನುಭವಿಸುತ್ತಿದ್ದಾರೆ. ಅದರಲ್ಲೂ ಕೊಡಗು, ಚಿಕ್ಕಮಗಳೂರು ಹಾಗೂ ಹಾಸನ ಜಿಲ್ಲೆಯಲ್ಲಿ ಕಾಡಾನೆಗಳ ಉಪಟಳ ಮಿತಿ ಮೀರಿದೆ. ಕಾಡಾನೆ ದಾಳಿಯಿಂದಲೇ ಸುಮಾರು 150 ಮಂದಿ ಹತ್ತು ವರ್ಷಗಳಲ್ಲಿ ಅಸುನೀಗಿದ್ದಾರೆ. ಬೆಳೆ ಹಾಗೂ ಆಸ್ತಿ ಪಾಸ್ತಿ ಹಾನಿ ಪ್ರಮಾಣವೂ ಹೆಚ್ಚಾಗಿದೆ. ಎರಡೂ ಜಿಲ್ಲೆಯಲ್ಲಿ 50ಕ್ಕೂ ಅಧಿಕ ಆನೆಗಳನ್ನು ಸೆರೆ ಹಿಡಿಯಲಾಗಿದೆ.

## ಮರಣ ಮೃದಂಗದ ಸುತ್ತ

ಮಾನವ ವನ್ಯಜೀವಿ ಸಂಘರ್ಷ ಹೊಸದೇನೂ ಅಲ್ಲ. ಹಿಂದಿನಿಂದಲೂ ಅರಣ್ಯದಂಚಿನ ಭಾಗದಲ್ಲಿ ಇದ್ದೇ ಇದೆ. ಈ ಪ್ರಮಾಣ ಒಂದು ದಶಕದ ಅವಧಿಯಲ್ಲಿ ಹೆಚ್ಚಾಗಿದೆ. ಇದು ವನ್ಯಜೀವಿಗಳು ನಾನಾ ಕಾರಣದಿಂದ ಜೀವ ಕಳೆದುಕೊಂಡಿರುವುದನ್ನು, ವನ್ಯಜೀವಿಗಳ ದಾಳಿಯಿಂದ ಮನುಷ್ಯನ ಸಾವಿನ ಸಂಖ್ಯೆಯಲ್ಲೂ ಏರಿಕೆಯಾಗುತ್ತಿರುವುದನ್ನು ಹೇಳುತ್ತದೆ.

ಕಾಡುಪ್ರಾಣಿಗಳ ಒಟ್ಟು ಸಾವಿನ ಸಂಖ್ಯೆಯಲ್ಲಿ ಶೇ.78ರಷ್ಟು ಸಹಜವಾಗಿ ಮೃತಪಟ್ಟಿದ್ದರೆ, ಅಸಹಜವಾದ ಕಾರಣಗಳಿಂದ ಶೇ.22ರಷ್ಟು ಜೀವ ಬಿಟ್ಟಿವೆ. ಅಂದರೆ ಮಾನವ ವನ್ಯಜೀವಿ ಸಂಘರ್ಷ ಇದರ ಹಿಂದೆ ಇರುವ ಪ್ರಮುಖ ಅಂಶವೂ ಹೌದು. ಬೇಟೆ, ವಿದ್ಯುದೀಕರಣ, ವಾಹನ ಡಿಕ್ಕಿಯಂತಹ ಕಾರಣಗಳನ್ನು ಪಟ್ಟಿ ಮಾಡಬಹುದು. ವನ್ಯಜೀವಿಗಳ ದಾಳಿಯಿಂದ ಮಾನವ ಸಾವಿನ ಪ್ರಮಾಣವೂ ಹತ್ತು ವರ್ಷದಲ್ಲಿ ಏರಿಕೆ ಕಂಡಿದೆ. ಈ ಅವಧಿಯಲ್ಲಿಯೇ 500 ಮಂದಿಯ ಜೀವ ಹಾನಿಯಾಗಿದೆ.

ದಕ್ಷಿಣ ಕರ್ನಾಟಕದಲ್ಲಿ ಕಾಡಾನೆ ಹಾಗೂ ಮಾನವ ಸಂಘರ್ಷ ವರ್ಷದಿಂದ ವರ್ಷಕ್ಕೆ ಏರುತ್ತಲೇ ಇದೆ. ಅರಣ್ಯ ಇಲಾಖೆ ತಾತ್ಕಾಲಿಕ ಪರಿಹಾರ ಕ್ರಮಗಳನ್ನು ಅಷ್ಟೇ ಅಲ್ಲದೆ ದೀರ್ಘಾವಧಿ ಪರಿಹಾರಗಳ ಬಗ್ಗೆಯೂ ಯೋಚಿಸಬೇಕು. ವಿದ್ಯುತ್ ಆಘಾತಕ್ಕೆ ಸಿಲುಕಿ ಕಾಡಾನೆಗಳು ಜೀವ ಬಿಡಲು ನಿಖರವಾದ ಕಾರಣ ಏನು? ಇದಕ್ಕೆ ಪರಿಹಾರ ಏನು? ಎಂದು ಯೋಚಿಸದೇ ಇದ್ದರೆ ಸಮಸ್ಯೆ ಬಿಗಡಾಯಿಸುತ್ತಲೇ ಹೋಗುತ್ತದೆ ಎಂದು ಮೈಸೂರಿನ ವಾಯ್ಸ್ ಫಾರ್ ವೈಲ್ಡ್‌ಲೈಫ್ ಸಂಸ್ಥೆಯ ಮುಖ್ಯಸ್ಥ ಕೆ.ಎಸ್.ಸುಧೀರ್ ಸಲಹೆ ನೀಡುತ್ತಾರೆ.

## ಪರಿಹಾರ ಪ್ರಮಾಣದಲ್ಲೂ ಏರಿಕೆ

ವನ್ಯಜೀವಿಗಳ ದಾಳಿಯಿಂದ ಜೀವ ಹಾಗೂ ಬೆಳೆ ಹಾನಿಯಾಗುತ್ತಿರುವ ಪ್ರಕರಣಗಳು ಹಾಗೂ

### ತೇಜಸ್ವಿಯವರ ಕಾಡಿನ ನೋಟ

ಪೂರ್ಣಚಂದ್ರ ತೇಜಸ್ವಿ ಅವರ 20ಕ್ಕೂ ಹೆಚ್ಚು ಕೃತಿಗಳು ಕಾಡು ಹಾಗೂ ವನ್ಯಜೀವಿಗಳ ಸುತ್ತಲೇ ಇವೆ. ಆಗ ಸಂಘರ್ಷಕ್ಕಿಂತ ಅರಣ್ಯ ಬಳಕೆ, ಜನರಿಗಿದ್ದ ನಂಬಿಕೆಗಳು, ಭಯ, ಅಭಿಮಾನ, ವನ್ಯಜೀವಿಗಳ ಬೇಟೆಗೆ ಇದ್ದ ಅವಕಾಶ, ಅದರ ಸುತ್ತಮುತ್ತಲಿನ ಮನುಷ್ಯ ವನ್ಯಜೀವಿಗಳ ನಂಟಿನ ಕಥಾನಕಗಳಿಗೆ ತೇಜಸ್ವಿ ಅಕ್ಷರ ರೂಪ ನೀಡಿದ್ದಾರೆ. ಕೆನೆತ್ ಅಂಡರ್ಸನ್‌ನ ಬೇಟೆ ರೋಚಕತೆಯನ್ನು ಕನ್ನಡಕ್ಕೆ ತಂದವರೂ ತೇಜಸ್ವಿ ಅವರೇ. ಅರಣ್ಯ ಹಾಗೂ ವನ್ಯಜೀವಿಗಳ ಸಮನ್ವಯತೆ, ಸಮತೋಲನ, ಸಂರಕ್ಷಣೆಯ ಮಾರ್ಗವನ್ನು ಅವರ ಕೃತಿಗಳು ತೋರುತ್ತವೆ.